I.D 11/2021
R.W. 1

ದಿನಾಂಕ 11-04-2023 ರಂದು ಆರ್.ಡಬ್ಲ್ಯು-**1 ರವರನ್ನು** ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**ಪಾಟಿಸವಾಲುಃ ಅರ್ಜಿದಾರರ ವಕೀಲರ ಪರ ಶ್ರೀ ಕೆ.ಬಿ.ಎ ವಕೀಲರಿಂದ**

1) ನಾನು ಸಾಮಾನ್ಯವಾಗಿ ಕೇವಲ ಕಾರ್ಮಿಕ ನ್ಯಾಯಾಲಯದ ಪ್ರಕರಣಗಳನ್ನು ನಡೆಸುತ್ತೇನೆ ಎನ್ನುವುದು ಸರಿಯಲ್ಲ. ನಾನು ಎಲ್ಲಾ ರೀತಿಯ ಪ್ರಕರಣಗಳನ್ನು ನಡೆಸುತ್ತೇನೆ. ಯಾವುದೇ ಒಂದು ಕಾರ್ಖಾನೆಗೆ ಸೇವಾ ನಿಯಮಗಳಿಗೆ ಸಂಬಂಧಪಟ್ಟಂತೆ ಸ್ಥಾಯಿ ಆದೇಶಗಳು ಇರುತ್ತವೆ. ಅದೇ ಸಂಸ್ಥೆಗಳಿಗೆ ಸೇವಾ ನಿಯಮಗಳು ಇರುತ್ತವೆ. ಪ್ರತಿವಾದಿ ಸಂಸ್ಥೆ ಒಂದು ಕಾರ್ಖಾನೆ ಆಗಿರುತ್ತದೆ. ಪ್ರತಿವಾದಿ ಸಂಸ್ಥೆಯು ತಮ್ಮ ಸಂಸ್ಥೆಯ ಸ್ಥಾಯಿ ಆದೇಶದ ದೃಢೀಕೃತ ನಕಲನ್ನು ನನ್ನ ಮುಂದೆ ಹಾಜರುಮಾಡಿಲ್ಲ ಎನ್ನುವುದು ಸರಿಯಲ್ಲ. ಈ ಪ್ರಕರಣದಲ್ಲಿ ಸ್ಥಾಯಿ ಆದೇಶದ ನಕಲನ್ನು ನನ್ನ ಮುಂದೆ ಹಾಜರುಪಡಿಸಿದ್ದು ಆಂತರಿಕ ವಿಚಾರಣೆಯಲ್ಲಿ ನಿಶಾನೆ ಎಂದು ಗುರುತಿಸಿರುವುದಿಲ್ಲ. ಸದರಿ ಸ್ಥಾಯಿ ಆದೇಶವನ್ನು ನನ್ನ ಮುಂದೆ ಹಾಜರುಪಡಿಸದ ಕಾರಣ ನಿಶಾನೆ ಎಂದು ಗುರುತಿಸಿಲ್ಲ ಎನ್ನುವುದು ಸರಿಯಲ್ಲ.

2) ಸಾಮಾನ್ಯವಾಗಿ ಯಾವುದೇ ಕಾರ್ಮಿಕ ಅಶಿಸ್ತಿನಿಂದ ನಡೆದುಕೊಂಡಲ್ಲಿ ಆತನಿಗೆ ಮೇಮೋ ಕೊಟ್ಟು ಸಮಜಾಯಿಷಿ ಕೇಳುತ್ತಾರೆ. ಸಮಜಾಯಿಷಿ ನೀಡಿದ ನಂತರ ಕಾರ್ಮಿಕನಿಗೆ ಅಪಾದನಾ ಪಟ್ಟಿಯನ್ನು ನೀಡಿ ನಂತರ ಆಂತರಿಕ ತನಿಖೆ ಮಾಡಬಹುದಾಗಿದೆ, ಆದರೆ ಕೆಲವು ಬಾರಿ ಮೇಮೋ ಮೇಲೆ ಆಂತರಿಕ ತನಿಖೆಯನ್ನು ಮಾಡಬಹುದಾಗಿದೆ. ಈ ಪ್ರಕರಣದಲ್ಲಿ ಅರ್ಜಿದಾರನಿಗೆ ಅಪಾದನಾ ಪಟ್ಟಿ ಮತ್ತು ಆಂತರಿಕ ತನಿಖಾ ನೋಟಿಸನ್ನು ಒಂದೇ ಬಾರಿ ನೀಡಿರುತ್ತದೆ. ಸದರಿ ನೋಟಿಸಿನಲ್ಲಿ ಅಂದರೆ ನಿಶಾನೆ ಆರ್ - 5 ರಲ್ಲಿ ಅರ್ಜಿದಾರನಿಗೆ 7 ದಿನದಲ್ಲಿ ನೋಟಿಸಿಗೆ ಉತ್ತರ ಕೊಡುವಂತೆ ಸೂಚಿಸಿರುತ್ತದೆ. ನಿಶಾನೆ ಆರ್ -5 ಕ್ಕೆ ಅರ್ಜಿದಾರ ನಿಶಾನೆ ಆರ್ -7 ರಂತೆ ಉತ್ತರ ಕೊಟ್ಟಿರುತ್ತಾನೆ. ನಿಶಾನೆ ಆರ್ -7 ನ್ನು ಅರ್ಜಿದಾರ ಆಂತರಿಕ ವಿಚಾರಣೆ ಸಮಯದಲ್ಲಿ ನನ್ನ ಮುಂದೆ ಕೊಟ್ಟಿದ್ದಾನೆ ಎನ್ನುವುದು ಸರಿಯಲ್ಲ. ನಿಶಾನೆ ಆರ್ -5 ನ್ಯಾಯದ ನೈಸರ್ಗಿಕ ನಿಯಮಕ್ಕೆ ವಿರುದ್ಧವಾಗಿದೆ ಎನ್ನುವುದು ಸರಿಯಲ್ಲ. ಎದುರುದಾರ ಸಂಸ್ಥೆ ಅರ್ಜಿದಾರನಿಗೆ ಸಮಜಾಯಿಷಿ ನೀಡಲು ಸಾಕಷ್ಟು ಕಾಲಾವಕಾಶ ನೀಡದ ಕಾರಣ ನಿಶಾನೆ ಆರ್ -7 ರಂತೆ ನನ್ನ ಮುಂದೆ ಉತ್ತರ ಕೊಟ್ಟಿದ್ದಾನೆ ಎನ್ನುವುದು ಸರಿಯಲ್ಲ. ನಿಶಾನೆ ಆರ್ - 5 ರೊಡನೆ ದಾಖಲೆಗಳ ಮತ್ತು ಸಾಕ್ಷಿದಾರರ ವಿವರಗಳನ್ನು ಪೂರೈಸಿಲ್ಲ

ಎನ್ನುವುದು ಸರಿ ಇದೆ. ಆಂತರಿಕ ತನಿಖಾ ಸಮಯದಲ್ಲಿ ಅರ್ಜಿದಾರನಿಗೆ ದಾಖಲೆಗಳ ವಿವರ ಮತ್ತು ಸಾಕ್ಷಿದಾರರ ವಿವರಗಳನ್ನು ಪೂರೈಸಿಲ್ಲ ಎನ್ನುವುದು ಸರಿಯಲ್ಲ.

3) ನನ್ನ ಮುಂದೆ ಆಂತರಿಕ ವಿಚಾರಣೆಯಲ್ಲಿ ಅಮರನಾಥ ಮತ್ತು ಸತೀಶ ಪೂಜಾರಿ ಎನ್ನುವವರು ತಮ್ಮ ಹೇಳಿಕೆಗಳನ್ನು ನೀಡಿಲ್ಲ ಎನ್ನುವುದು ಸರಿಯಲ್ಲ. ಸದರಿ ಸಾಕ್ಷಿದಾರರು ಕೊಟ್ಟ ಪತ್ರವನ್ನು ನಾನು ಆಂತರಿಕ ವಿಚಾರಣೆ ಕಾಲದಲ್ಲಿ ನಿಶಾನೆ ಎಂದು ಗುರುತಿಸಿಲ್ಲ ಎನ್ನುವುದು ಸರಿಯಲ್ಲ. ಸದರಿ ಅಮರನಾಥ ಮತ್ತು ಸತೀಶ ಪೂಜಾರಿ ಪೊಲೀಸರ ಮುಂದೆ ಮತ್ತು ಸಹಾಯಕ ಕಾರ್ಮಿಕ ಆಯುಕ್ತರ ಮುಂದೆ ದೂರು ಕೊಟ್ಟ ಬಗ್ಗೆ ನನ್ನ ಮುಂದೆ ಯಾವುದೇ ದಾಖಲೆ ಹಾಜರು ಮಾಡಿರುವುದಿಲ್ಲ.

4) ಇಂದು ನ್ಯಾಯಾಲಯದ ಮುಂದೆ ಇರುವ ಅರ್ಜಿದಾರರನ್ನು ಆಂತರಿಕ ವಿಚಾರಣಾ ಸಮಯದಲ್ಲಿ ನೋಡಿರಬಹುದಾಗಿದೆ. ಅರ್ಜಿದಾರನ ಹುದ್ದೆ ಬಾಯ್ಲರ್ ಆಪರೇಟರ್ ಎಂದು ಇರಬಹುದಾಗಿದೆ. ಅರ್ಜಿದಾರನ ವಿದ್ಯಾರ್ಹತೆ ಏನು ಎಂದು ನಾನು ಕೇಳಿ ತಿಳಿದುಕೊಂಡಿರುವುದಿಲ್ಲ. ಬಾಯ್ಲರ್ ಅಪರೇಟರ್ ನ ಕರ್ತವ್ಯ ಏನು ಎಂದು ನನಗೆ ಗೊತ್ತಿರುವುದಿಲ್ಲ. ನಾನು ಅರ್ಜಿದಾರನಿಗೆ ಸರಿಯಾಗಿ ಪಾಟೀಸವಾಲು ಮಾಡಲು ಬಿಟ್ಟಿಲ್ಲ ಎನ್ನುವುದು ಸರಿಯಲ್ಲ. ಅರ್ಜಿದಾರನು ಕೇಳಿದ ಪಾಟೀಸವಾಲಿನ ಪ್ರಶ್ನೆಗಳಿಗೆ ಬಂದ ಉತ್ತರಗಳನ್ನು ನಾನು ಪೂರ್ಣವಾಗಿ ದಾಖಲಿಸಿಲ್ಲ ಎನ್ನುವುದು ಸರಿಯಲ್ಲ. ನಾನು ಅರ್ಜಿದಾರನು ಕೊಟ್ಟ ಹೇಳಿಕೆಯನ್ನು ಸಹ ಸರಿಯಾಗಿ ದಾಖಲಿಸಿಕೊಂಡಿಲ್ಲ ಎನ್ನುವುದು ಸರಿಯಲ್ಲ. ಎದುರುದಾರ ಸಂಸ್ಥೆಯ ಪ್ರಸೆಂಟಿಂಗ್ ಆಫೀಸರ್ ಹಾಜರಿದ್ದರೂ ಸಹ ಅರ್ಜಿದಾರನ ಪಾಟೀಸವಾಲನ್ನು ನಾನೇ ಕೇಳಿ ದಾಖಲಿಸಿಕೊಂಡಿದ್ದೇನೆ ಎನ್ನುವುದು ಸರಿಯಲ್ಲ. ಆಂತರಿಕ ವಿಚಾರಣೆಯ ಪ್ರತಿದಿನದ ನಡಾವಳಿಯ ಒಂದು ನಕಲನ್ನು ಅದೇ ದಿನ ಅರ್ಜಿದಾರನನಿಗೆ ಕೊಟ್ಟಿಲ್ಲ ಎನ್ನುವುದು ಸರಿಯಲ್ಲ. ನಾನ ಅರ್ಜಿದಾರನಿಗೆ ಸರಿಯಾಗಿ ಅವಕಾಶ ಕೊಡದೇ ನನ್ನ ಮನಸ್ಸಿಗೆ ತೋಚಿದಂತೆ ಆಂತರಿಕ ವಿಚಾರಣೆ ಮಾಡಿದ್ದೇನೆ ಎನ್ನುವುದು ಸರಿಯಲ್ಲ. ಎದುರುದಾರ ಸಂಸ್ಥೆಯ ಆಡಳಿತ ಮಂಡಳಿಗೆ ಅನುಕೂಲವಾಗುವಂತೆ ಅರ್ಜಿದಾರ ಯಾವುದೇ ತಪ್ಪು ಮಾಡದಿದ್ದರೂ ಸಹ ಆತನ ಮೇಲೆ ಸುಳ್ಳು ವಿಚಾರಣಾ ವರದಿಯನ್ನು ಕೊಟ್ಟಿದ್ದೇನೆ ಎನ್ನುವುದು ಸರಿಯಲ್ಲ.

5) ಆಂತರಿಕ ತನಿಖೆಯನ್ನು ಆರಂಭ ಮಾಡುವ ಮೊದಲು ಅರ್ಜಿದಾರ ಮತ್ತು ಎದುರುದಾರ ಸಂಸ್ಥೆಗೆ ಅಂದರೆ ಮಂಡನಾಧಿಕಾರಿಗೆ ತನಿಖೆಯ ರೀತಿ ನಿಯಮಗಳನ್ನು ವಿವರಿಸಿರುತ್ತೇನೆ. ನಾನು ಅರ್ಜಿದಾರನಿಗೆ ಯಾವಾಗ ಆತನ ದಾಖಲೆಗಳನ್ನು ಮತ್ತು ಹೇಳಿಕೆಗಳನ್ನು ಹಾಜರುಪಡಿಸಬೇಕೆಂದು ವಿವರಿಸಿಲ್ಲ ಎನ್ನುವುದು ಸರಿಯಲ್ಲ.

6) ಎದುರುದಾರ ಸಂಸ್ಥೆ ನನಗೆ ಆಂತರಿಕ ವಿಚಾರಣೆಯ ತನಿಖಾಧಿಕಾರಿ ಎಂದು ನೇಮಕ ಮಾಡಿದ ಬಗ್ಗೆ ಪ್ರತ್ಯೇಕವಾಗಿ ಆದೇಶ ನೀಡಿರುವುದಿಲ್ಲ, ಸಾಕ್ಷಿ ಸ್ವತಃ ಹೇಳುವುದೇನೆಂದರೆ ಆಂತರಿಕ ತನಿಖಾ ನೋಟಿಸಿನಲ್ಲಿ ಆ ಬಗ್ಗೆ ಉಲ್ಲೇಖ ಇರುತ್ತದೆ. ನಾನು ಎದುರುದಾರ ಸಂಸ್ಥೆಗೆ ಆಂತರಿಕ ತನಿಖೆ ಮಾಡಲು ಒಪ್ಪಿಕೊಂಡಿದ್ದೇನೆಂದು ಒಂದು ಪತ್ರವನ್ನು ನೀಡಿರಬಹುದಾಗಿದೆ. ನನಗೆ ಈ ಪ್ರಕರಣದ ಆಂತರಿಕ ವಿಚಾರಣೆಯನ್ನು ಮಾಡಲು ಯಾವುದೇ ನೇಮಕಾತಿ ಆದೇಶವನ್ನು ಕೊಟ್ಟಿಲ್ಲ ಹಾಗೂ ನಾನು ಎದುರುದಾರ ಸಂಸ್ಥೆ ಗೆ ನನ್ನ ಒಪ್ಪಿಗೆ ಪತ್ರವನ್ನು ಕೊಟ್ಟಿಲ್ಲ ಎನ್ನುವುದು ಸರಿಯಲ್ಲ.

- ಮರುವಿಚಾರಣೆ - ಇಲ್ಲ -

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

(ಶಾಂತವೀರ ಶಿವಪ್ಪ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ,
ಉಡುಪಿ